ಕರ್ನಾಟಕ ಸರ್ಕಾರ
ತಾಂತ್ರಿಕ ಶಿಕ್ಷಣ ಇಲಾಖೆ

ಸಂ: ಡಿಟಿಇ 01 ಸಿಡಿಸಿ 2023 (1029891)

ಆಯುಕ್ತರ ಕಛೇರಿ,
ತಾಂತ್ರಿಕ ಶಿಕ್ಷಣ ಭವನ,
ಅರಮನೆ ರಸ್ತೆ,
ಬೆಂಗಳೂರು- 560001
ದಿನಾಂಕ:19.02.2024

## ಸುತ್ತೋಲೆ

ವಿಷಯ: ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳಲ್ಲಿ ವಿಚಾರ ಸಂಕಿರಣಗಳನ್ನು (Seminars) ಆಯೋಜಿಸುವ ಕುರಿತು.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಪ್ರಧಾನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ), ಕರ್ನಾಟಕ ಸರ್ಕಾರ ರವರ ನಿರ್ದೇಶನದಂತೆ, ಕರ್ನಾಟಕದಾದ್ಯಂತ ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳ ಪ್ರಾಂಶುಪಾಲರುಗಳು ಸಂಸ್ಥೆಯಲ್ಲಿರುವ ವಿವಿಧ ವಿಭಾಗಗಳ ವಿಭಾಗಾಧಿಕಾರಿಗಳು, ಉಪನ್ಯಾಸಕರು ಮತ್ತು ವಿದ್ಯಾರ್ಥಿಗಳು ಮಾಡಿರುವ ಉತ್ತಮ ಸಂಶೋಧನೆಗಳು, ಪೇಟೆಂಟ್‌ಗಳು, ಅತ್ಯುತ್ತಮ ಅಭ್ಯಾಸಗಳು, ಅನುಭವ ಹಂಚಿಕೆ, ಪುಸ್ತಕ ಬರವಣಿಗೆ, ಸಂಶೋಧನಾ ಯೋಜನೆಗಳು, ಸಮಾಲೋಚನೆ, ಪ್ರಕಟಣೆಗಳು, ಸಮ್ಮೇಳನಗಳಲ್ಲಿ ಪ್ರಸ್ತುತಿ, ಆಹ್ವಾನಿತ ಮಾತುಕತೆಗಳು ಹಾಗೂ ಇತರೆ Best Practices ಕುರಿತು ತಮ್ಮ ಅನುಭವಗಳನ್ನು ಹಂಚಿಕೊಳ್ಳುವ ನಿಟ್ಟಿನಲ್ಲಿ ಪ್ರತಿ ತಿಂಗಳು 5 ಮತ್ತು 20 ನೇ ತಾರೀಖಿನಂದು ಸಂಜೆ 5 ರಿಂದ 7 ಗಂಟೆಯವರೆಗೆ Video Conference ಮೂಲಕ ವಿಷಯ ಮಂಡಿಸಲು ತಿಳಿಸಲಾಗಿದೆ.

ಸದರಿ ವಿಚಾರ ಸಂಕಿರಣಗಳನ್ನು (Seminars) ಆಯೋಜಿಸಲು ಶ್ರೀ ರಾಜಶೇಖರ್ ಟಿ., ಆಯ್ಕೆಶ್ರೇಣಿ ಉಪನ್ಯಾಸಕರು ಇವರನ್ನು ಸಂಯೋಜಕರನ್ನಾಗಿ ನೇಮಿಸಲಾಗಿದ್ದು, ಸದರಿಯವರು ವಿಚಾರ ಸಂಕಿರಣಗಳನ್ನು (Seminars) ಆಯೋಜಿಸಲು ಸಮನ್ವಯಾಧಿಕಾರಿಯಾಗಿ ಕಾರ್ಯನಿರ್ವಹಿಸಲು ತಿಳಿಸಿದೆ.

ಸಂಸ್ಥೆಯ ಪ್ರಾಂಶುಪಾಲರುಗಳು ವಿಚಾರ ಸಂಕಿರಣಗಳನ್ನು (Seminars) ಏರ್ಪಡಿಸಿದ ನಂತರ ವರದಿಯನ್ನು ಸಂಬಂಧಿತ ದಾಖಲೆ ಮತ್ತು ಫೋಟೋಗಳೊಂದಿಗೆ ತಾಂತ್ರಿಕ ಶಿಕ್ಷಣ ಇಲಾಖೆಗೆ ಕಳುಹಿಸಿಕೊಡಲು ಈ ಮೂಲಕ ಸೂಚಿಸಲಾಗಿದೆ.

Signed by
Prasanna H
Date: 20-02-2024 12:51:03

ನಿರ್ದೇಶಕರು

ಇವರಿಗೆ: ಅಗತ್ಯ ಕ್ರಮಕ್ಕಾಗಿ.
ಎಲ್ಲಾ ಸರ್ಕಾರಿ ಪಾಲಿಟೆಕ್ನಿಕ್ ಕಾಲೇಜುಗಳ ಪ್ರಾಂಶುಪಾಲರುಗಳಿಗೆ.

ಪ್ರತಿ:

1. ಶ್ರೀ ರಾಜಶೇಖರ್ ಟಿ., ಆಯ್ಕೆಶ್ರೇಣಿ ಉಪನ್ಯಾಸಕರು, DTE, ಬೆಂಗಳೂರು-ಅಗತ್ಯ ಕ್ರಮಕ್ಕಾಗಿ
2. ಇ-ಗವರ್ನೆನ್ಸ್ ವಿಭಾಗ, ತಾಂ.ಶಿ.ಇ., ಬೆಂಗಳೂರು-ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಲು.
3. ಕಡತಕ್ಕೆ